**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಸಿ.ಸಿ. ನಂಃ6/2019** **ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **23.08.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** ಆರೋಪಿ ಪರ **ಬಿ.ಎಂ.ಎನ್** ವಕೀಲರಿಂದಃ

ನಾನು 6 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಚಾಸಾ-2 ರಿಂದ 5 ನನ್ನ ಊರಿನವರು. 1 ನೇ ಆರೋಪಿ ತಿಮ್ಮೇಗೌಡರ ಹೆಂಡತಿ. 2 ನೇ ಆರೋಪಿ ಹಾಗೂ ತಿಮ್ಮೇಗೌಡ ಅಣ್ಣ-ತಮ್ಮಂದಿರು. 3 ರಿಂದ 5 ನೇ ಆರೋಪಿತರು 2 ನೇ ಆರೋಪಿಯ ಮಕ್ಕಳು.

ಗಲಾಟೆಯು ದಿನಾಂಕ **04.08.2019** ರಂದು ಆಗಿರುತ್ತದೆ. ಗಲಾಟೆಯು ನಮ್ಮ ಮನೆಯ ಮುಂಭಾಗದ ಜಾಗದಲ್ಲಿ ಆಗಿರುತ್ತದೆ. ಸದರಿ ಜಾಗದ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸದರಿ ಜಾಗದ ಚೆಕ್ಕು ಬಂದಿ ಪೂರ್ವಕ್ಕೆ-ರಸ್ತೆ, ಪಶ್ಚಿಮಕ್ಕೆ- ನಮ್ಮ ಮನೆ, ಉತ್ತರಕ್ಕೆ- ಚಾಮೇಗೌಡರವರ ಮನೆ, ದಕ್ಷಿಣಕ್ಕೆ ಸಹ ಸದರಿಯವರ ಮನೆ ಇರುತ್ತದೆ.

ದಾವಾ ಆಸ್ತಿಯು ನನಗೆ ಸೇರಿರುತ್ತದೆ ಎಂದು ಪೊಲೀಸರಿಗೆ ದಾಖಲೆಯನ್ನು ನೀಡಿರುತ್ತೇನೆ. ಗಲಾಟೆಯು ಬೆಳಿಗ್ಗೆ **10.30** ರಿಂದ **11.30** ಗಂಟೆ ಸಮಯದಲ್ಲಿ ಆಗಿರುತ್ತದೆ. ಗಲಾಟೆಯಾದ ಸಮಯದಲ್ಲಿ ನಾನು ಮತ್ತು ಆರೋಪಿತರು ಮಾತ್ರ ಇದ್ದೆವು. ಆರೋಪಿತರು ಜಾಗ ಅವರಿಗೆ ಬರಬೇಕು ಎಂದು ಹಾಗೂ ನಾನು ಗದ್ದೆಗೆ ಹೋಗಿ ಬರುವಷ್ಟರಲ್ಲಿ ಆಡು ಮರಿಗಳಿಗೆ ಹುಲ್ಲು ಹಾಕಿದ್ದರು. ನಾನು ಅದನ್ನು ಕೇಳಿದ್ದಾಗ ಆರೋಪಿಗಳು ಸದರಿ ಜಾಗ ಅವರಿಗೆ ಸೇರಬೇಕು ಎಂದು ಹೇಳಿರುತ್ತಾರೆ. ಆರೋಪಿತರು ಸದರಿ ಜಾಗ ತಮಗೆ ಸೇರಬೇಕು ಎಂದು ಹೇಳಿ ನಂತರ ಎಲ್ಲಿಗೆ ಹೋದರು ಎನ್ನುವುದು ನನಗೆ ಗೊತ್ತಿರುವುದಿಲ್ಲ.

ಆರೋಪಿತರು ನನಗೆ ಹೊಡೆದಿರುವುದಿಲ್ಲ, ಆದರೆ ಕೊರಳು ಪಟ್ಟಿಯನ್ನು ಹಿಡಿದುಕೊಂಡಿರುತ್ತಾರೆ. ಶರ್ಟಿನ ಕೊರಳ ಪಟ್ಟಿ ಹಿಡಿದ್ದಾಗಿ ಶರ್ಟು ಹರಿದಿರುವುದಿಲ್ಲ. ಆರೋಪಿಗಳು ಕೊರಳು ಪಟ್ಟಿ ಹಿಡಿದಿರುವ ವಿಚಾರವನ್ನು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ನಂತರ ನಾನು ಎಲ್ಲಿಗೂ ಹೋಗಿರುವುದಿಲ್ಲ, ಮನೆಯಲ್ಲಿಯೇ ಇದ್ದೆನು.

ಮನೆಯ ಹತ್ತಿರ ಚಾಸಾ-2 ರಿಂದ 5 ರವರು ಬಂದಿರುತ್ತಾರೆ. ನಾನು ಪೊಲೀಸ್ ಠಾಣೆಗೆ 2 ದಿನಗಳ ನಂತರ ಹೋಗಿರುತ್ತೇನೆ. ಪೊಲೀಸ್ ಠಾಣೆಗೆ ನನ್ನೊಂದಿಗೆ ನನ್ನ ಮಗ ಬಂದಿರುತ್ತಾನೆ. ನನ್ನ ಮಗ ರಾಜೇಶರವರು ವಕೀಲರು ಎಂದರೆ ಸರಿ.

ನಾನು ಪೊಲೀಸ್ ಠಾಣೆಗೆ ಹೋದ ದಿನಾಂಕ ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಬೆಳಿಗ್ಗೆ 11.30 ಗಂಟೆ ಆಗಿತ್ತು. ದೂರನ್ನು ನಮ್ಮ ಬನ್ನೂರಿನ ನಿವಾಸಿಯವರು ಬರೆದುಕೊಟ್ಟಿರುತ್ತಾರೆ. ಸದರಿ ದೂರಿನಲ್ಲಿ ಏನು ಬರೆದಿರುತ್ತದೆ ಎನ್ನುವುದನ್ನು ನಾನು ತಿಳಿದುಕೊಂಡಿರುವುದಿಲ್ಲ. ಪೊಲೀಸರು ನಮ್ಮ ಮನೆಯ ಹತ್ತಿರ ಅದೇ ದಿನ ಸಂಜೆ ಬಂದಿರುತ್ತಾರೆ. ಪೊಲೀಸರು ಸ್ಥಳದಲ್ಲಿ ಬರವಣಿಗೆ ಮಾಡಿರುತ್ತಾರೆ. ಬರವಣಿಗೆ ಮಾಡುವ ಸಮಯದಲ್ಲಿ ನಾನು ಪೊಲೀಸರಿಗೆದಾಖಲೆಯನ್ನು ನೀಡಿರುತ್ತೇನೆ. ಸದರಿ ಬರವಣಿಗೆಗೆ ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಸದರಿ ಬರವಣಿಗೆಯಲ್ಲಿ ಏನು ಬರೆದಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ.

ನಾನು ದಿನಾಂಕ 06.04.2018 ರಂದು ಆರೋಪಿತರು ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಮೊದಲು ತಾತ್ಕಲಿಕ ನಿರ್ಬಂದಕಾಜ್ಞೆಯನ್ನು ನನ್ನ ಪರವಾಗಿ ನೀಡಿದ್ದರು ಎಂದರೆ ಸರಿ. ಆರೋಪಿತರು ಸದರಿ ದಾವೆಯಲ್ಲಿ ತಕರಾರು ಹಾಕಿದ ನಂತರ ತಾತ್ಕಲಿಕ ನಿರ್ಬಂದಕಾಜ್ಞೆಯನ್ನು ರದ್ದುಗೊಳಿಸಿ ಯಥಾಸ್ಥಿತಿ ಕಾಪಾಡಲು ಆದೇಶಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನಾನು ಆರೋಪಿತರ ಆಸ್ತಿಗೆ ಸುಳ್ಳು ಸಿವಿಲ್ ಪ್ರಕರಣ ದಾಖಲಿಸಿ ನಂತರ ಸುಳ್ಳು ದೂರನ್ನು ನೀಡಿ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಅವರ ಜಾಗದಲ್ಲಿ ಆಡು ಮರಿಗಳಿಗೆ ಹುಲ್ಲು ಹಾಕಿಕೊಂಡು ಇದ್ದು, ನಾನು ಸದರಿಯವರ ಹತ್ತಿರ ಹೋಗಿ ತಕರಾರು ಮಾಡಿರುತ್ತೇನೆ ಮತ್ತು ಆರೋಪಿತರು ನನಗೆ ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ:</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**